2 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಭಧ್ರಾವತಿ.

ದಿನಾಂಕಃ 12.08.2024 ರಂದು ಪಿ.ಡಬ್ಲ್ಯೂ-2 ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎ.ಎನ್.ಟಿ ವಕೀಲರಿಂದಃ**

1. ಸರ್ವೆ ನಂಬರ್ 49 ರಲ್ಲಿ 300-350 ಜನಕ್ಕೆ ನಿವೇಶಗಳು ಮಂಜೂರು ಆಗಿರುವುದು. ದಾವಾಸ್ತಿ ವಾದಿಯವರ ಹೆಸರಿನಲ್ಲಿ ಇದೆ. ವಾದಿಯವರ ಹೆಂಡತಿ ಉಮಾ ಬಗ್ಗೆ ಗೊತ್ತಿದೆ. ಸದರಿಯವರ ಹೆಸರಿನಲ್ಲಿ ಯಾವುದೇ ಆಸ್ತಿ ಇಲ್ಲ. 1 ನೇ ಪ್ರತಿವಾದಿಯವರು ಹೆಸರಿನಲ್ಲಿ ಆಸ್ತಿ ಇದೆ. ಸದರಿಯವರಿಗೆ ಆಸ್ತಿಯನ್ನು ಮಂಜೂರು ಮಾಡಲಾಗಿದೆ. ಸದರಿಯವರ ಹೆಸರಿಗೆ ಪಂಚಾಯತಿ ಖಾತೆ ಇದೆ. ಸದರಿಯವರು ಏನು ಸಾಧನೆ ಮಾಡುತ್ತಿದ್ದಾರೆ ಎಂದು ಗೊತ್ತಿಲ್ಲ. ವಾದಿಯವರ ಹೆಂಡತಿ ಮತ್ತು 1 ನೇ ಪ್ರತಿವಾದಿಯವರು ಪಂಚಾಯತಿಗೆ ನೀಡಿದ ದಾಖಲೆಗಳನ್ನು ನೋಡಿದ್ದೇನೆ. ಸದರಿಯವರು ಆಸ್ತಿಗಳನ್ನು ಅದಲು ಬದಲು ಮಾಡಿ ಎಂದು ಅರ್ಜಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ಉಮಾ ಯವುದೇ ಅರ್ಜಿ ಕೊಟ್ಟಿಲ್ಲ. ಸದರಿ 300-350 ಜನ ತಮ್ಮ ನಿವೇಶನದ ಸ್ವಾಧೀನದಲ್ಲಿ ಇದ್ದಾರೆ. 2006 ರಲ್ಲಿ ವಾದಿಯವ ರ ಹೆಂಡತಿ ಮತ್ತು 1 ನೇ ಪ್ರತಿವಾದಿ ತಮ್ಮ ನಿವೇಶನದ ಸ್ವಾಧೀನ ಹೆಚ್ಚು ಕಡಿಮೆ ಇದೆ ಆದ್ದರಿಂದ ಖಾತೆಗಳನ್ನು ಬದಲಾವಣೆ ಮಾಡಿ ಎಂದು ಅರ್ಜಿ ಕೊಟ್ಟಿದ್ದರು ಎಂದರೆ ಸರಿಯಲ್ಲ.

2006 ರಲ್ಲಿ ಠರಾವು ಮಾಡಿ ಖಾತೆ ಬದಲಾವಣೆ ಮಾಡಲಾಯಿತು ಎಂದರೆ ಸರಿಯಲ್ಲ. ಆದ್ದರಿಂದ 1 ನೇ ಪ್ರತಿವಾದಿಯವರೇ ದಾವಾಸ್ತಿಯ ಸಾವಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

2. ಮಹಾದೇವಪ್ಪ ಯಾರು ಎಂದು ಗೊತ್ತು. ಸದರಿಯವರ ಸಹ 1 ನೇ ಪ್ರತಿವಾದಿಯ ವಿರುದ್ದ ದಾವೆ ಹಾಕಿದ್ದಾರೆ ಎಂದರೆ ಸರಿ. ದಾವಾಸ್ತಿಗೆ ಸಂಬಂಧಪಟ್ಟ ಹಾಗೆ ದಾವೆ ಹಾಕಿದ್ದಾರೆ. ಸದರಿ ಮಹಾದೇವಪ್ಪ ತಮ್ಮ ಆಸ್ತಿಯ ಸ್ವಾಧೀನದಲ್ಲಿ ಇದ್ದಾರೆ. ದಾವಾಸ್ತಿಯ ಅಕ್ಕಪಕ್ಕ ದಲ್ಲಿ ನಮ್ಮ ಆಸ್ತಿ ಇಲ್ಲ. ನಾನು ಪಂಚಾಯತಿಯಲ್ಲಿ ಅಧ್ಯಕ್ಷನಾಗಿ ಸೇವೆ ಸಲ್ಲಿಸಿದ್ದೇನೆ. ದಾವಾಸ್ತಿಗೆ ಸಂಬಂಧಪಟ್ಟ ದಾಖಲೆಗಳನ್ನು ಪಂಚಾಯತಿಯಲ್ಲಿ ನೋಡಿಲ್ಲ. ವ್ಯಕ್ತಿಕವಾಗಿ ದಾವಾಸ್ತಿಗೆ ಸಂಬಂಧಪಟ್ಟಂತೆ ವಿಚಾರಗಳು ವ್ಯಕ್ತಿಕವಾಗಿ ನನಗೆ ಗೊತ್ತಿದೆ. ಸಾಕ್ಷಿ ಮುಂದುವರೆದು 2017-18 ರಲ್ಲಿ ವಾದಿ ಹೆಂಡತಿ ಮತ್ತು 1 ನೇ ಪ್ರತಿವಾದಿ ಆಸ್ತಿಗಳನ್ನು ಅದಲು ಬದಲು ಮಾಡಿಕೊಂಡಿದ್ದಾರೆ ಎಂದು ವಿಚಾರ ಗೊತ್ತಾಯಿತು, ಆಗ ಪಂಚಾಯತಿ ಸೇರಿಸಿ ಇಬ್ಬರ ದಾಖಲೆಗಳನ್ನು ನೋಡಿ ವಾದಿಯ ಹೆಸರಿನಲ್ಲಿ ತಹಶೀಲ್ದಾರ್ ರವ ರು ಸಹಿ ಮೊಹರು ಇದ್ದ ದಾಖಲೆ ಇತ್ತು, 1 ನೇ ಪ್ರತಿವಾದಿಯವರ ಹೆಸರಿನಲ್ಲಿ ಇದ್ದ ದಾಖಲೆಯನ್ನು ಪಂಚಾಯತಿಯವರು ಸೃಷ್ಟಿ ಮಾಡಿದ್ದರು ಸದರಿಯವರ ದಾಖಲೆಯಲ್ಲಿ ತಹಶೀಲ್ದಾರ್ ರವರ ಸಹಿ ಮೊಹರು ಇರಲಿಲ್ಲ ಎಂದು ನುಡಿಯುತ್ತಾರೆ. ಸದರಿ 1 ನೇ ಪ್ರತಿವಾದಿಯವರ ದಾಖಲೆಯನ್ನು ತಾಲ್ಲೂಕು ಪಂಚಾಯತಿ

ಇಓ ಬಳಿ ಪ್ರಶ್ನೆ ಮಾಡಿದ್ದಾರೆ. ದಾವಾಸ್ತಿಯ ಬಗ್ಗೆ ನಿಖರವಾದ ಮಾಹಿತಿ ಇಲ್ಲದಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(2 ನೇ ಪ್ರತಿವಾದಿಯ ಪರ ವಕೀಲರು ಗೈರು ಹಾಜರಿದ್ದ ಕಾರಣ ಪಟೀ ಸವಾಲು ಇಲ್ಲ ಎಂದರು ತೆಗೆದುಕೊಳ್ಳಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(Sd/-)

2 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ., ಭದ್ರಾವತಿ.